**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2189 |
| 2 | ಸದಸ್ಯರ ಹೆಸರು | : | ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 26-03-2026 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಪ್ರತಿ ನಿತ್ಯ ಎಷ್ಟು ಟನ್ ಹಸಿ ಮತ್ತು ಒಣ ಕಸ ಉತ್ಪಾದನೆ ಆಗುತ್ತಿದೆ; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು) | ಪ್ರತಿನಿತ್ಯ 3190 ಮೆ.ಟನ್ ಹಸಿತ್ಯಾಜ್ಯ ಮತ್ತು 2030 ಮೆ.ಟನ್ ಒಣತ್ಯಾಜ್ಯ ಉತ್ಪಾದನೆಯಾಗುತ್ತಿರುವುದೆಂದು ಅಂದಾಜಿಸಲಾಗಿದೆ. ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು <u>ಅನುಬಂಧ-1</u> ರಲ್ಲಿ ಒದಗಿಸಿದೆ. |
| ಆ) | ಸದರಿ ಕಸವನ್ನು ವೈಜ್ಞಾನಿಕವಾಗಿ ಯಾವ ರೀತಿ ವಿಲೇವಾರಿ ಮಾಡಲಾಗುತ್ತಿದೆ; (ವಿವರ ನೀಡುವುದು) | • ಜಿಬಿಎ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಹಸಿತ್ಯಾಜ್ಯವನ್ನು 8 ಘನತ್ಯಾಜ್ಯ ನಿರ್ವಹಣಾ ಘಟಕಗಳಲ್ಲಿ (ಜಿಬಿಎ ಮಾಲೀಕತ್ವದ 7 ಘಟಕಗಳು ಮತ್ತು ಖಾಸಗಿ ಮಾಲೀಕತ್ವದ 1 ಘಟಕ) ನಿರ್ವಹಿಸಲಾಗುತ್ತಿದೆ.<br>• ಮುಂದುವರೆದು, 600 ಟಿಪಿಡಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನಾ ಘಟಕವನ್ನು ಮೆ॥ ಕೆಪಿಸಿಎಲ್ ಸಂಸ್ಥೆಯ ಜಂಟಿ ಸಹಭಾಗಿತ್ವದಲ್ಲಿ ನಿರ್ಮಿಸಿ ನಿರ್ವಹಿಸಲಾಗುತ್ತಿದೆ.<br>• ಇದಲ್ಲದೇ ಬಯೋಮಿಥಿನೇಶನ್ ಘಟಕಗಳು ವಿಕೇಂದ್ರಿಕೃತ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು (ಒಣತ್ಯಾಜ್ಯ ಸಂಗ್ರಹಣಾ ಕೇಂದ್ರಗಳು, ಎಲೆ ಗೊಬ್ಬರ ಕೇಂದ್ರಗಳು ಇತ್ಯಾದಿಗಳನ್ನು) ಸಹ ನಿರ್ಮಿಸಿ ನಿರ್ವಹಿಸಲಾಗುತ್ತಿದೆ. |
| ಇ) | ಈ ಕಸವನ್ನು ಯಾವ ಯಾವ ಸ್ಥಳಗಳಲ್ಲಿ ಡಂಪ್ ಮಾಡಲಾಗುತ್ತಿದೆ; ಸದರಿ ಡಂಪಿಂಗ್ ಯಾರ್ಡ್‌ಗಳ ಒಟ್ಟು ಸಾಮರ್ಥ್ಯ ಎಷ್ಟು; ಪ್ರತಿ ದಿನ ಈ ಡಂಪಿಂಗ್ ಯಾರ್ಡ್‌ಗಳಿಗೆ ಎಷ್ಟು ಲಾರಿ ಕಸ ಸಾಗಿಸಲು ಆದೇಶ ಆಗಿದೆ; (ಆದೇಶದ ಪ್ರತಿ ಒದಗಿಸುವುದು) | ವಿವರಗಳನ್ನು <u>ಅನುಬಂಧ-2</u> ರಲ್ಲಿ ಒದಗಿಸಿದೆ. |
| ಈ) | ಪ್ರಸ್ತುತ ಇರುವ ಡಂಪಿಂಗ್ ಯಾರ್ಡ್‌ಗಳ ಸುತ್ತಮುತ್ತಲ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಹಾಗೂ ಡಂಪಿಂಗ್ ಯಾರ್ಡ್‌ಗಳಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಎಷ್ಟು ಅನುದಾನ ಬಿಡುಗಡೆ ಮಾಡಿದೆ; (ಆದೇಶದ ಪ್ರತಿ ನೀಡುವುದು).<br>ಹೊಸದಾಗಿ ಡಂಪಿಂಗ್ ಯಾರ್ಡ್‌ಗಳಿಗಾಗಿ ಸ್ಥಳಗಳನ್ನು ಆಯ್ಕೆ ಮಾಡಲಾಗಿದೆಯೇ; (ವಿವರ ನೀಡುವುದು) | • ಘನತ್ಯಾಜ್ಯ ಘಟಕಗಳ ಸುತ್ತಮುತ್ತಲಿನ ಗ್ರಾಮಗಳ/ಪ್ರದೇಶಗಳ ಅಭಿವೃದ್ಧಿಗೆ ಸ್ಥಳೀಯ ಶಾಸಕರುಗಳು ಮನವಿಯನ್ನು ಸಲ್ಲಿಸಿದ್ದು, ಸದರಿ ಮನವಿಯನ್ನು ಪರಿಗಣಿಸುವ ಸಮಯದಲ್ಲಿ ಬಿಎಸ್‌ಡಬ್ಲ್ಯೂಎಂಎಲ್ ಸಂಸ್ಥೆಯ ಆಯವ್ಯಯದಲ್ಲಿ ಲಭ್ಯವಿರುವ ಮೊತ್ತದ ಆಧಾರದ ಮೇರೆಗೆ ಮತ್ತು ಹೆಚ್ಚು ತ್ಯಾಜ್ಯವನ್ನು ಸಂಸ್ಕರಣೆ/ವಿಲೇವಾರಿ ಮಾಡುವ ತ್ಯಾಜ್ಯದ ಪರಿಮಾಣವಾರು ಘಟಕಗಳ ಸುತ್ತಮುತ್ತಲಿನ ವಿಧಾನಸಭಾ ಕ್ಷೇತ್ರಗಳಿಗೆ ರೂ.350.00 ಕೋಟಿಗಳ ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ.<br>• ಹಾಲಿ ಹಂಚಿಕೆ ಮಾಡಿರುವ ರೂ.350.00 ಕೋಟಿಗಳ ಅನುದಾನದ ವಿವರಗಳನ್ನು <u>ಅನುಬಂಧ-3</u> ರಲ್ಲಿ ಒದಗಿಸಿದೆ. |

. . .2.

| | | |
|---|---|---|
| | | • ಸಮಗ್ರ ಘನತ್ಯಾಜ್ಯ ಸಂಗ್ರಹಣೆಗಾಗಿ ದೊಡ್ಡಬಳ್ಳಾಪುರ ತಾಲ್ಲೂಕು ಗುಂಡ್ಲಹಳ್ಳಿ ಗ್ರಾಮದಲ್ಲಿ ಸುಮಾರು 134 ಎಕರೆ ಮತ್ತು ಬೆಂಗಳೂರು ದಕ್ಷಿಣ ತಾಲ್ಲೂಕು ಗೊಲ್ಲಹಳ್ಳಿ ಗ್ರಾಮದಲ್ಲಿ 84 ಎಕರೆ ಜಾಗವನ್ನು ಗುರುತಿಸಲಾಗಿರುತ್ತದೆ. ನಿಷ್ಕ್ರಿಯ ತ್ಯಾಜ್ಯ ವಿಲೇವಾರಿಗಾಗಿ ಬೆಂಗಳೂರು ಪೂರ್ವ ತಾಲ್ಲೂಕು ಕಾಡಗ್ರಹಾರ ಗ್ರಾಮದಲ್ಲಿ 18 ಎಕರೆ ಜಾಗವನ್ನು ಗುರುತಿಸಲಾಗಿರುತ್ತದೆ. |
| ಉ) | ಡಂಪಿಂಗ್ ಯಾರ್ಡ್‌ಗಳಿಗೆ ಕಸ ಸಾಗಿಸಲು ಸ್ಥಳೀಯರು ವಿರೋಧ ವ್ಯಕ್ತಪಡಿಸುತ್ತಿರುವುದಕ್ಕೆ ಕಾರಣಗಳೇನು? | ಸಂಸ್ಕರಣಾ / ಭೂಭರ್ತಿ ಘಟಕದ ಸುತ್ತಮುತ್ತಲಿನ ಗ್ರಾಮಸ್ಥರು ತಮ್ಮ ಪ್ರದೇಶಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆಗೊಳಿಸಲು ಹಾಗೂ ಕಾಮಗಾರಿಗಳನ್ನು ಕೈಗೊಳ್ಳಲು ಒತ್ತಾಯಿಸಿ ಡಂಪಿಂಗ್ ಯಾರ್ಡ್‌ಗಳಿಗೆ ಕಸ ಸಾಗಿಸಲು ವಿರೋಧ ವ್ಯಕ್ತಪಡಿಸುತ್ತಿರುತ್ತಾರೆ. |

**ನಅಇ 290 ಎಂಎಸ್‌ವೈ 2026 (ಇ)**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ

Annexure -1

| Sl. No. | Division | Wet waste | Dry Waste |
|---|---|---|---|
| 1 | Chickpete | 101 | 85 |
| 2 | Basavanagudi | 99.01 | 55 |
| 3 | Shivajinagara | 91 | 65 |
| 4 | Byatarayanapura | 110 | 35 |
| 5 | Padmanabhanagara | 79 | 45 |
| 6 | Gandhinagara | 95 | 45 |
| 7 | Vijayanagara | 95 | 55 |
| 8 | KR Puram | 123.91 | 54 |
| 9 | Shanthinagar | 88 | 60 |
| 10 | Yelahanka | 95 | 52 |
| 11 | Mahadevapura | 171 | 48 |
| 12 | C.V Raman Nagara | 125 | 79 |
| 13 | BTM Layout | 150 | 91 |
| 14 | RR Nagara | 235 | 122 |
| 15 | Jayanagara | 110 | 79 |
| 16 | Rajajinagara | 110 | 65 |
| 17 | Bengaluru South | 185 | 135 |
| 18 | Yashavanthapura | 136 | 95 |
| 19 | Dasarahalli | 139 | 73 |
| 20 | Malleshwaram | 76.9 | 50 |
| 21 | Govindarajanagara | 119 | 98 |
| 22 | Bommanahalli | 180.32 | 120 |
| 23 | Mahalakshmi Layout | 99 | 66 |
| 24 | Chamarajapete | 105 | 98 |
| 25 | Hebbal | 101 | 92 |
| 26 | Pulakeshinagar | 91 | 98 |
| 27 | Sarvagnanagara | 80 | 70 |
| | **Total** | **3190.1** | **2030** |

Scanned with OKEN Scanner

## ಅನುಬಂಧ–2

| ಕ್ರಸಂ. | ಘಟಕದ ಹೆಸರು | ವಿಲೇವಾರಿ ಸಾಮರ್ಥ್ಯ (ಮೆ.ಟನ್‌ಗಳಲ್ಲಿ) | ತ್ಯಾಜ್ಯ ವಿಲೇವಾರಿ ಮಾಡಲು ನಿಗಧಿಸಿದ ವಾಹನಗಳ ಸಂಖ್ಯೆ |
|---|---|---|---|
| 01 | ಚಿಕ್ಕನಾಗಮಂಗಲ | 350 | 39 |
| 02 | ದೊಡ್ಡಬಿದರಕಲ್ಲು | 150 | 22 |
| 03 | ಕನ್ನಹಳ್ಳಿ | 350 | 45 |
| 04 | ಕೆ.ಸಿ.ಡಿ.ಸಿ | 350 | 23 |
| 05 | ಲಿಂಗಧೀರನಹಳ್ಳಿ | 150 | 17 |
| 06 | ಸೀಗೆಹಳ್ಳಿ | 120 | 15 |
| 07 | ಸುಬ್ಬರಾಯನಪಾಳ್ಯ | 150 | 11 |
| 08 | ಎಂ.ಎಸ್.ಜಿ.ಪಿ (ಖಾಸಗಿ ಘಟಕ) | 500 | 73 |
| 09 | ಭೂಭರ್ತಿ ಘಟಕ | 2800 | 250 |

**ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ**

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೊಳಪಟ್ಟಿದೆ)

ನೊಂ. ಕಛೇರಿ: 30/1, 1 ಮತ್ತು 2ನೇ ಮಹಡಿ, ಯು. ಎಸ್.ಐ. ಕಟ್ಟಡ, [illegible]

ಬಂಡ್ ರಸ್ತೆ, ವಸಂತನಗರ, ಬೆಂಗಳೂರು-560051

ಇಮೇಲ್: bswml2021@gmail.com


**ಸಂಖ್ಯೆ:** ಬಿಎಸ್‌ಡಬ್ಲ್ಯೂಎಮ್‌ಎಲ್/ಮು.ಕಾ. ನಿ/ಪಿಎಲ್/ /2025-26 **ದಿನಾಂಕ:** 01.01.2026

## ಕಛೇರಿ ಆದೇಶ

ವಿಷಯ: ತ್ಯಾಜ್ಯ ವಿಲೇವಾರಿ ಘಟಕಗಳಿಗೆ ಕಾಂಪ್ಯಾಕ್ಟರ್ ವಾಹನಗಳನ್ನು ನಿಯೋಜಿಸುವ ಕುರಿತು.

*******

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಭೂಭರ್ತಿ ಪ್ರದೇಶದ ಮೇಲೆ ದಿನದಿಂದ ದಿನಕ್ಕೆ ತ್ಯಾಜ್ಯದ ಹೊರೆ ಹೆಚ್ಚುತ್ತಿದ್ದು, ಸದರಿ ಹೊರೆಯನ್ನು ಕಡಿಮೆ ಮಾಡಲು ಸಂಸ್ಕರಣಾ ಘಟಕಗಳಿಗೆ ಸಾಮರ್ಥ್ಯಕ್ಕೆ ಅನುಗುಣವಾಗಿ ತ್ಯಾಜ್ಯವನ್ನು ಕಳುಹಿಸಲು ಅನುಗುಣವಾಗುವಂತೆ ಸಂಖ್ಯೆಯನ್ನು ನಿಗಧಿಪಡಿಸಬೇಕಾಗುತ್ತದೆ.

ವಿವಿಧ ತ್ಯಾಜ್ಯ ಸಂಸ್ಕರಣಾ ಘಟಕಗಳಲ್ಲಿ ದೈನಂದಿನ ವಿಲೇವಾರಿ ಸಾಮರ್ಥ್ಯವನ್ನು (ಮೆಟ್ರಿಕ್ ಟನ್‌ಗಳಲ್ಲಿ) ಸುಗಮವಾಗಿ ನಿರ್ವಹಿಸಲು ವಾಹನಗಳ ಅವಶ್ಯಕತೆ ಇರುತ್ತದೆ. ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ, ಈ ಕೆಳಕಂಡ ಘಟಕಗಳಿಗೆ ಅವುಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಕಾಂಪ್ಯಾಕ್ಟರ್ ವಾಹನಗಳನ್ನು ನಿಯೋಜಿಸಿವುದು.

ಘಟಕಗಳ ವಿವರ ಮತ್ತು ನಿಗದಿಪಡಿಸಿದ ವಾಹನಗಳ ಸಂಖ್ಯೆ ಈ ಕೆಳಗಿನಂತಿದೆ:

| ಕ್ರ. ಸಂ. | ಘಟಕದ ಹೆಸರು | ವಿಲೇವಾರಿ ಸಾಮರ್ಥ್ಯ (ಮ.ಟನ್‌ಗಳಲ್ಲಿ) | ತ್ಯಾಜ್ಯ ಸಂಸ್ಕರಣೆ ಮಾಡಲು ನಿಗದಿಪಡಿಸಿದ ಕಾಂಪ್ಯಾಕ್ಟರ್‌ಗಳ ಸಂಖ್ಯೆ |
|---|---|---|---|
| 1 | ಚಿಕ್ಕನಾಗಮಂಗಲ | 350 | 39 |
| 2 | ದೊಡ್ಡಬಿದರಕಲ್ಲು | 150 | 22 |
| 3 | ಕನ್ನಹಳ್ಳಿ | 350 | 45 |
| 4 | ಕೆ.ಸಿ.ಡಿ.ಸಿ | 350 | 23 |
| 5 | ಲಿಂಗಧೀರನಹಳ್ಳಿ | 150 | 17 |
| 6 | ಸೀಗೆಹಳ್ಳಿ | 120 | 15 |
| 7 | ಸುಬ್ಬರಾಯನಪಾಳ್ಯ | 150 | 12 |
| 8 | ಮೆ॥ಎಂ.ಎಸ್.ಜಿ.ಪಿ ಇನ್ಫ್ರಾಟೆಕ್ | 500 | 73 |
| 9 | ಭೂಭರ್ತಿ ಘಟಕ | | 250 |

ಈ ಆದೇಶವು ಮುಂದಿನ ಮೂರು ತಿಂಗಳಿಗೆ ಅನ್ವಯಿಸಲಿದೆ.

ಸದರಿ ಘಟಕಗಳಲ್ಲಿ ತ್ಯಾಜ್ಯ ನಿರ್ವಹಣೆ ಮತ್ತು ವಿಲೇವಾರಿ ಕಾರ್ಯಗಳು ಯಾವುದೇ ಅಡಚಣೆಯಿಲ್ಲದೆ ನಡೆಯಲು ಹಾಗೂ ನಿಗದಿತ ಗುರಿಯನ್ನು ಸಾಧಿಸಲು ತಕ್ಷಣದಿಂದ ಜಾರಿಗೆ ಬರುವಂತೆ ಕ್ರಮ ವಹಿಸತಕ್ಕದ್ದು.

01/01/2026

**ಮುಖ್ಯ ಕಾರ್ಯನಿರ್ವಹಣಾಧಿಕಾರಿ,**
ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ.

**ಪ್ರತಿಯನ್ನು:**

1. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಬಿಎಸ್‌ಡಬ್ಲ್ಯೂಎಮ್‌ಎಲ್ ಹಾಗೂ ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು ಹಾಗೂ ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ) ರವರ ಮಾಹಿತಿಗಾಗಿ.
3. ಎಲ್ಲಾ ಉಪ ಪ್ರಧಾನ ವ್ಯವಸ್ಥಾಪಕರು, ಬಿಎಸ್‌ಡಬ್ಲ್ಯೂಎಮ್‌ಎಲ್ ರವರ ಸೂಕ್ತ ಕ್ರಮಕ್ಕಾಗಿ.
4. ಹಿರಿಯ ತಾಂತ್ರಿಕ ಸಲಹೆಗಾರರು, , ಬಿಎಸ್‌ಡಬ್ಲ್ಯೂಎಮ್‌ಎಲ್ ರವರ ಸೂಕ್ತ ಕ್ರಮಕ್ಕಾಗಿ
5. ಕಛೇರಿ ಪ್ರತಿ.

## ಅನುಬಂಧ-3

| ಕ್ರ ಸಂ. | ವಿಧಾನಸಭಾ ಕ್ಷೇತ್ರದ ವಿವರ | ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಘಟಕಗಳ ಒಟ್ಟು ಪ್ರತಿನಿತ್ಯದ ಒಟ್ಟು ಸಾಮರ್ಥ್ಯ (ಮೆ.ಟನ್‌ಗಳಲ್ಲಿ) | ಹಂಚಿಕೆ ಮಾಡಲಾದ ಅನುದಾನ (ರೂ ಕೋಟಿಗಳಲ್ಲಿ) |
|---|---|---|---|
| 1 | ಯಶವಂತಪುರ | ಸಿಗೇಹಳ್ಳಿ, ದೊಡ್ಡಬಿದರಕಲ್ಲು, ಸುಬ್ಬರಾಯನಪಾಳ್ಯ ಲಿಂಗಧೀರನಹಳ್ಳಿ ಮತ್ತು ಕನ್ನಹಳ್ಳಿ ಸಂಸ್ಕರಣಾ ಘಟಕಗಳು ಒಟ್ಟು 920 ಟನ್ ತ್ಯಾಜ್ಯ ಸಂಸ್ಕರಿಸುವ ಸಾಮರ್ಥ್ಯ ಹೊಂದಿದೆ. | 90.00 |
| 2 | ಬ್ಯಾಟರಾಯಪುರ | ಮಿಟ್ಟಗಾನಹಳ್ಳಿ/ಕಣ್ಣೂರು ಭೂಭರ್ತಿ ಘಟಕವು 2 ವಿಧಾನ ಸಭಾ ಕ್ಷೇತ್ರದ ಗಡಿಭಾಗದಲ್ಲಿ ಇದ್ದು, ಸದರಿ ಘಟಕದಲ್ಲಿ ಪ್ರತಿನಿತ್ಯ 2800 ವಿಲೇವಾರಿ ಮಾಡಲಾಗುತ್ತದೆ. | 90.00 |
| 3 | ಮಹದೇವಪುರ | | 90.00 |
| 4 | ಆನೇಕಲ್ | ಚಿಕ್ಕನಾಗಮಂಗಲ ಸಂಸ್ಕರಣಾ ಘಟಕವು ಒಟ್ಟು 350 ಮೆ ಟನ್ ತ್ಯಾಜ್ಯ ಸಂಸ್ಕರಿಸುವ ಸಾಮರ್ಥ್ಯ ಹೊಂದಿದೆ. | 50.00 |
| 5 | ಬೆಂಗಳೂರು ದಕ್ಷಿಣ | ಕೆಸಿಡಿಸಿ ಸಂಸ್ಕರಣಾ ಘಟಕವು ಒಟ್ಟು 350 ಮೆ ಟನ್ ತ್ಯಾಜ್ಯ ಸಂಸ್ಕರಿಸುವ ಸಾಮರ್ಥ್ಯ ಹೊಂದಿದೆ. | 20.00 |
| 6 | ದೊಡ್ಡಬಳ್ಳಾಪುರ | ಮೆ॥ ಎಂಎಸ್‌ಜಿಪಿ ಖಾಸಗಿ ಮಾಲೀಕತ್ವದ ಸಂಸ್ಕರಣಾ ಘಟಕವು ಒಟ್ಟು 500 ಮೆ ಟನ್ ತ್ಯಾಜ್ಯ ಸಂಸ್ಕರಿಸುವ ಸಾಮರ್ಥ್ಯ ಹೊಂದಿದೆ. | 10.00 |
| | | ಒಟ್ಟು | 350.00 |

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ
(ಕರ್ನಾಟಕ ಸರ್ಕಾರ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಜಂಟಿ ಸಂಸ್ಥೆ)
ರಿ.ಕ:30/1, 1ನೇ ಹಾಗೂ 2ನೇ ಮಹಡಿ, ತಿಮ್ಮಯ್ಯ ರಸ್ತೆ,
ಮಿಲ್ಲರ್ ಟ್ಯಾಂಕ್ ಬಂಡ್ ರೋಡ್, ವಸಂತ್ ನಗರ, ಬೆಂಗಳೂರು – 560052.

**ವಿಷಯ:** ಆನೇಕಲ್ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಸಂಸ್ಕರಣ ಘಟಕಗಳ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನವನ್ನು ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:**
1. ಶಾಸಕರು, ಆನೇಕಲ್ ವಿಧಾನ ಸಭಾ ಕ್ಷೇತ್ರರವರ ಟಿಪ್ಪಣಿ ದಿನಾಂಕ: 05.12.2025.
2. ಮಾನ್ಯ ಉಪಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರರವರ ಟಿಪ್ಪಣಿ ಸಂಖ್ಯೆ: ಉಮು/ವಿಸೌಕ/728/2025-26, ದಿನಾಂಕ: 11.12.2025.

*********************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ನಗರವು ಸುಮಾರು 714 ಚ.ಕಿ.ಮೀ. ವಿಸ್ತೀರ್ಣ ಪ್ರದೇಶದಲ್ಲಿ ವ್ಯಾಪಿಸಿದ್ದು, ಬೆಂಗಳೂರು ನಗರ ಜಿಲ್ಲೆಯಲ್ಲಿ ಉತ್ಪತ್ತಿಯಾಗುವ ಎಲ್ಲಾ ಪ್ರಕಾರದ ಘನತ್ಯಾಜ್ಯದ ಸಂಗ್ರಹಣೆ, ಸಾಗಣೆ ಮತ್ತು ವಿಲೇವಾರಿಯನ್ನು ವೃತ್ತಿಪರವಾಗಿ ನಿರ್ವಹಿಸುವ ಹಿತದೃಷ್ಟಿಯಿಂದ ಘನ ಸರ್ಕಾರವು ಸರ್ಕಾರಿ ಸ್ವಾಮ್ಯದ "ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ" ವನ್ನು ಸ್ಥಾಪಿಸಿರುತ್ತದೆ.

ಪ್ರಸ್ತುತ ಬೆಂಗಳೂರು ನಗರದಲ್ಲಿ ಪ್ರತಿದಿನ ಅಂದಾಜು 6,500 ಮೆ.ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಇದರಲ್ಲಿ ಅಂದಾಜು 2,020 ಮೆ.ಟನ್ ಹಸಿ ತ್ಯಾಜ್ಯವನ್ನು ಸಂಸ್ಕರಣ ಘಟಕಗಳಿಗೆ ಸಾಗಿಸಿ ಸಂಸ್ಕರಣೆ ಮಾಡಲಾಗುತ್ತಿದ್ದು, ವಾರ್ಡ್ ಮಟ್ಟದಲ್ಲಿ ಹಲವಾರು ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳ ಮೂಲಕ ಮೂಲದಲ್ಲಿಯೇ ತ್ಯಾಜ್ಯದ ವಿಂಗಡಣೆಗಾಗಿ ಸಾರ್ವಜನಿಕರಿಗೆ ಜಾಗೃತಿಯನ್ನು ಮೂಡಿಸಲಾಗುತ್ತಿದೆ. ಸಾರ್ವಜನಿಕರ ಮನಸ್ಥಿತಿ ಬದಲಾವಣೆಗಾಗಿ ಜಾಗೃತಿ ಕಾರ್ಯಕ್ರಮಗಳ ಆಯೋಜನೆಯು ಒಂದು ನಿರಂತರ ಪ್ರಕ್ರಿಯೆಯಾಗಿರುತ್ತದೆ.

ನಗರದಲ್ಲಿನ ಹಸಿ ತ್ಯಾಜ್ಯ ನಿರ್ವಹಣೆಗಾಗಿ ಸ್ಥಳೀಯ ಸಂಸ್ಥೆಯು ಪ್ರಸ್ತುತ ಚಾಲ್ತಿಯಲ್ಲಿರುವ ಸಂಸ್ಕರಣ ಘಟಕಗಳ ಮೇಲೆಯೇ ಅವಲಂಬಿತವಾಗಿದ್ದು, ಸಂಸ್ಕರಣ ಘಟಕಗಳ ಸುತ್ತಮುತ್ತಲಿನ ಪ್ರದೇಶವು ಜನ ವಸತಿ ಪ್ರದೇಶವಾಗಿರುತ್ತದೆ. ತ್ಯಾಜ್ಯದ ಸಂಸ್ಕರಣೆಗಾಗಿ ಪದೇ-ಪದೇ ಪ್ರತಿಭಟನೆಯನ್ನು ಎದುರಿಸಬೇಕಾದಂತಹ ಪರಿಸ್ಥಿತಿ ತಲೆದೋರಿರುತ್ತದೆ. ಸದರಿ ಘಟಕಗಳಲ್ಲಿ ಸಂಸ್ಕರಣೆಯು ನಿರಂತರವಾಗಿ ಮತ್ತು ಸರಾಗವಾಗಿ ಅನುಷ್ಠಾನಗೊಳ್ಳದಿದ್ದಲ್ಲಿ, ಇಡೀ ನಗರದ ಘನತ್ಯಾಜ್ಯ ನಿರ್ವಹಣಾ ವ್ಯವಸ್ಥೆಯ ಮೇಲೆ ಪರಿಣಾಮ ಬೀರಿ ವ್ಯವಸ್ಥಿತ ಕಾರ್ಯಾಚರಣೆಗೆ ಧಕ್ಕೆಯುಂಟಾಗುತ್ತಿರುತ್ತದೆ. ಹಸಿ ತ್ಯಾಜ್ಯ ನಿರ್ವಹಣೆಯ ಪೂರ್ಣ ಪ್ರಮಾಣದ ವ್ಯವಸ್ಥಿತ ಕಾರ್ಯಾಚರಣೆಗಾಗಿ ಸಂಸ್ಕರಣ ಘಟಕಗಳ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂಲಭೂತ

ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮೂಲಕ ಸದರಿ ಪ್ರದೇಶದಲ್ಲಿ ವಾಸಿಸುವ ಜನರ ಜೀವನ ನಿರ್ವಹಣೆಯನ್ನು ಆರೋಗ್ಯಕರವಾಗಿಸಬಹುದಾಗಿರುತ್ತದೆ.

ಸದರಿ ಸಂಸ್ಕರಣ ಘಟಕಗಳ ಸರಾಗ ಮತ್ತು ವ್ಯವಸ್ಥಿತ ನಿರ್ವಹಣೆಗಾಗಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಹಿತದೃಷ್ಟಿಯಿಂದ ತುರ್ತಾಗಿ ಅನುದಾನ ಬಿಡುಗಡೆ ಮಾಡುವುದು ಅತ್ಯಾವಶ್ಯಕವಾಗಿರುತ್ತದೆ.

ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಗಿನಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಮು.ಕಾ.ಅ/ಆಶಾ/ಪಿಆರ್/341/2025-26, ದಿನಾಂಕ: 17.02.2026**

ಪ್ರಸಕ್ತ 2025-26ನೇ ಸಾಲಿನಲ್ಲಿ ಬೆಂ.ಘ.ನಿ.ನಿಕ್ಕೆ ಅನುಮೋದನೆ ನೀಡಲಾದ ಕ್ರಿಯಾ ಯೋಜನೆಯ ಮೊತ್ತ ರೂ.1,500 ಕೋಟಿಗಳಲ್ಲಿ ಉಳಿಕೆ ಮೊತ್ತ ಮತ್ತು ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ಪರಿಸರ ಪರಿಹಾರದ ನಿಧಿಯಿಂದ ಕೈಗೊಳ್ಳುವ ಕಾಮಗಾರಿಗಳಿಗೆ ಮೀಸಲಿರಿಸಿದ ಮೊತ್ತವು ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಪಾವತಿಯಾಗದೇ ಇರುವುದರಿಂದ ಮುಂಬರುವ ಆಯವ್ಯಯ/ಪರಿಷ್ಕೃತ ಆಯವ್ಯಯದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ಮಹಾನಗರ ಪಾಲಿಕೆಗಳು ಅನುದಾನ ಮಂಜೂರು ಮಾಡಬಹುದೆಂಬ ಘಟನ್ಯೋತ್ತರ ಅನುಮೋದನೆಯ ನಿರೀಕ್ಷಣೆಯ ಮೇರೆಗೆ ಆನೇಕಲ್ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಸಂಸ್ಕರಣ ಘಟಕಗಳ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.50.00 ಕೋಟಿಗಳ ಅನುದಾನವನ್ನು ಬಿಡುಗಡೆಮಾಡಿ ಆದೇಶಿಸಿದೆ.

(ಮಾನ್ಯ ವ್ಯವಸ್ಥಾಪಕ ನಿರ್ದೇಶಕರುರವರಿಂದ ಅನುಮೋದಿಸಲ್ಪಟ್ಟಿದೆ)

17/2/26

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ

ಪ್ರತಿಯನ್ನು:

1. ಮಾನ್ಯ ಆಡಳಿತಗಾರರು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮಹಾನಗರ ಪಾಲಿಕೆಗಳು, ಬೆಂಗಳೂರುರವರ ಅವಗಾಹನೆಗಾಗಿ.
2. ಮಾನ್ಯ ಅಧ್ಯಕ್ಷರು, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತರವರ ಅವಗಾಹನೆಗಾಗಿ.
3. ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು ರವರ ಅವಗಾಹನೆಗಾಗಿ.
4. ವಿಶೇಷ ಆಯುಕ್ತರು(ಹಣಕಾಸು), ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು ರವರ ಅವಗಾಹನೆಗಾಗಿ.
5. ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾ)/ಮುಅ, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತರವರ ಮಾಹಿತಿಗಾಗಿ.
6. ಮುಖ್ಯ ಹಣಕಾಸು ಅಧಿಕಾರಿಗಳು, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತರವರ ಅಗತ್ಯ ಕ್ರಮಕ್ಕಾಗಿ.
7. ಕಛೇರಿ ಪ್ರತಿ.

# ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ

(ಕರ್ನಾಟಕ ಸರ್ಕಾರ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಜಂಟಿ ಸಂಸ್ಥೆ)
ರಿ.ಕ:30/1, 1ನೇ ಹಾಗೂ 2ನೇ ಮಹಡಿ, ತಿಮ್ಮಯ್ಯ ರಸ್ತೆ,
ಮಿಲ್ಲರ್, ಟ್ಯಾಂಕ್ ಬಂಡ್ ರೋಡ್, ವಸಂತ್ ನಗರ, ಬೆಂಗಳೂರು – 560052.

**ವಿಷಯ:** ಯಶವಂತಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಸಂಸ್ಕರಣ ಘಟಕಗಳ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನವನ್ನು ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:**
1. ಶಾಸಕರು, ಯಶವಂತಪುರ ವಿಧಾನ ಸಭಾ ಕ್ಷೇತ್ರರವರ ಟಿಪ್ಪಣಿ ದಿನಾಂಕ: 18.11.2025.
2. ಮಾನ್ಯ ಉಪಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರರವರ ಟಿಪ್ಪಣಿ ಸಂಖ್ಯೆ: ಉಮು/ವಿಸೌಕ/728/2025-26, ದಿನಾಂಕ: 11.12.2025.

*********************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ನಗರವು ಸುಮಾರು 714 ಚ.ಕಿ.ಮೀ. ವಿಸ್ತೀರ್ಣ ಪ್ರದೇಶದಲ್ಲಿ ವ್ಯಾಪಿಸಿದ್ದು, ಬೆಂಗಳೂರು ನಗರ ಜಿಲ್ಲೆಯಲ್ಲಿ ಉತ್ಪತ್ತಿಯಾಗುವ ಎಲ್ಲಾ ಪ್ರಕಾರದ ಘನತ್ಯಾಜ್ಯದ ಸಂಗ್ರಹಣೆ, ಸಾಗಣೆ ಮತ್ತು ವಿಲೇವಾರಿಯನ್ನು ವೃತ್ತಿಪರವಾಗಿ ನಿರ್ವಹಿಸುವ ಹಿತದೃಷ್ಟಿಯಿಂದ ಘನ ಸರ್ಕಾರವು ಸರ್ಕಾರಿ ಸ್ವಾಮ್ಯದ "ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ" ವನ್ನು ಸ್ಥಾಪಿಸಿರುತ್ತದೆ.

ಪ್ರಸ್ತುತ ಬೆಂಗಳೂರು ನಗರದಲ್ಲಿ ಪ್ರತಿದಿನ ಅಂದಾಜು 6,500 ಮೆ.ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಇದರಲ್ಲಿ ಅಂದಾಜು 2,020 ಮೆ.ಟನ್ ಹಸಿ ತ್ಯಾಜ್ಯವನ್ನು ಸಂಸ್ಕರಣ ಘಟಕಗಳಿಗೆ ಸಾಗಿಸಿ ಸಂಸ್ಕರಣೆ ಮಾಡಲಾಗುತ್ತಿದ್ದು, ವಾರ್ಡ್ ಮಟ್ಟದಲ್ಲಿ ಹಲವಾರು ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳ ಮೂಲಕ ಮೂಲದಲ್ಲಿಯೇ ತ್ಯಾಜ್ಯದ ವಿಂಗಡಣೆಗಾಗಿ ಸಾರ್ವಜನಿಕರಿಗೆ ಜಾಗೃತಿಯನ್ನು ಮೂಡಿಸಲಾಗುತ್ತಿದೆ. ಸಾರ್ವಜನಿಕರ ಮನಸ್ಥಿತಿ ಬದಲಾವಣೆಗಾಗಿ ಜಾಗೃತಿ ಕಾರ್ಯಕ್ರಮಗಳ ಆಯೋಜನೆಯು ಒಂದು ನಿರಂತರ ಪ್ರಕ್ರಿಯೆಯಾಗಿರುತ್ತದೆ.

ನಗರದಲ್ಲಿನ ಹಸಿ ತ್ಯಾಜ್ಯ ನಿರ್ವಹಣೆಗಾಗಿ ಸ್ಥಳೀಯ ಸಂಸ್ಥೆಯು ಪ್ರಸ್ತುತ ಚಾಲ್ತಿಯಲ್ಲಿರುವ ಸಂಸ್ಕರಣ ಘಟಕಗಳ ಮೇಲೆಯೇ ಅವಲಂಬಿತವಾಗಿದ್ದು, ಸಂಸ್ಕರಣ ಘಟಕಗಳ ಸುತ್ತಮುತ್ತಲಿನ ಪ್ರದೇಶವು ಜನ ವಸತಿ ಪ್ರದೇಶವಾಗಿರುತ್ತದೆ. ತ್ಯಾಜ್ಯದ ಸಂಸ್ಕರಣೆಗಾಗಿ ಪದೇ-ಪದೇ ಪ್ರತಿಭಟನೆಯನ್ನು ಎದುರಿಸಬೇಕಾದಂತಹ ಪರಿಸ್ಥಿತಿ ತಲೆದೋರಿರುತ್ತದೆ. ಸದರಿ ಘಟಕಗಳಲ್ಲಿ, ಸಂಸ್ಕರಣೆಯು ನಿರಂತರವಾಗಿ ಮತ್ತು ಸರಾಗವಾಗಿ ಅನುಷ್ಠಾನಗೊಳ್ಳದಿದ್ದಲ್ಲಿ, ಇಡೀ ನಗರದ ಘನತ್ಯಾಜ್ಯ ನಿರ್ವಹಣಾ ವ್ಯವಸ್ಥೆಯ ಮೇಲೆ ಪರಿಣಾಮ ಬೀರಿ ವ್ಯವಸ್ಥಿತ ಕಾರ್ಯಾಚರಣೆಗೆ ಧಕ್ಕೆಯುಂಟಾಗುತ್ತಿರುತ್ತದೆ. ಹಸಿ ತ್ಯಾಜ್ಯ ನಿರ್ವಹಣೆಯ ಪೂರ್ಣ ಪ್ರಮಾಣದ ವ್ಯವಸ್ಥಿತ ಕಾರ್ಯಾಚರಣೆಗಾಗಿ ಸಂಸ್ಕರಣ ಘಟಕಗಳ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂಲಭೂತ

ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮೂಲಕ ಸದರಿ ಪ್ರದೇಶದಲ್ಲಿ ವಾಸಿಸುವ ಜನರ ಜೀವನ ನಿರ್ವಹಣೆಯನ್ನು ಆರೋಗ್ಯಕರವಾಗಿಸಬಹುದಾಗಿರುತ್ತದೆ.

ಸದರಿ ಸಂಸ್ಕರಣ ಘಟಕಗಳ ಸರಾಗ ಮತ್ತು ವ್ಯವಸ್ಥಿತ ನಿರ್ವಹಣೆಗಾಗಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಹಿತದೃಷ್ಟಿಯಿಂದ ತುರ್ತಾಗಿ ಅನುದಾನ ಬಿಡುಗಡೆ ಮಾಡುವುದು ಅತ್ಯಾವಶ್ಯಕವಾಗಿರುತ್ತದೆ.

ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಗಿನಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಮು.ಕಾ.ಅ/ಆಶಾ/ಪಿಆರ್/340/2025-26, ದಿನಾಂಕ: 17.02.2026**

ಪ್ರಸಕ್ತ 2025-26ನೇ ಸಾಲಿನಲ್ಲಿ ಬೆಂ.ಘ.ನಿ.ನಿಕ್ಕೆ ಅನುಮೋದನೆ ನೀಡಲಾದ ಕ್ರಿಯಾ ಯೋಜನೆಯ ಮೊತ್ತ ರೂ.1,500 ಕೋಟಿಗಳಲ್ಲಿ ಉಳಿಕೆ ಮೊತ್ತ ಮತ್ತು ಸ್ವಚ್ಛ ಭಾರತ ಅಭಿಯಾನದಡಿ ಕೈಗೊಳ್ಳುವ ಕಾಮಗಾರಿಗಳಿಗೆ ಮೀಸಲಿರಿಸಿದ ಸ್ಥಳೀಯ ಸಂಸ್ಥೆಯ ವಂತಿಕೆ ಮೊತ್ತ ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಪಾವತಿಯಾಗದೇ ಇರುವುದರಿಂದ ಮುಂಬರುವ ಆಯವ್ಯಯ/ಪರಿಷ್ಕೃತ ಆಯವ್ಯಯದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ಮಹಾನಗರ ಪಾಲಿಕೆಗಳು ಅನುದಾನ ಮಂಜೂರು ಮಾಡಬಹುದೆಂಬ ಘಟನೋತ್ತರ ಅನುಮೋದನೆಯ ನಿರೀಕ್ಷಣೆಯ ಮೇರೆಗೆ ಯಶವಂತಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಸಂಸ್ಕರಣ ಘಟಕಗಳ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.90.00 ಕೋಟಿಗಳ ಅನುದಾನವನ್ನು ಬಿಡುಗಡೆಮಾಡಿ ಆದೇಶಿಸಿದೆ.

**(ಮಾನ್ಯ ವ್ಯವಸ್ಥಾಪಕ ನಿರ್ದೇಶಕರುರವರಿಂದ ಅನುಮೋದಿಸಲ್ಪಟ್ಟಿದೆ)**

**ಮುಖ್ಯ ಕಾರ್ಯನಿರ್ವಹಣಾಧಿಕಾರಿ**
**ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ**

**ಪ್ರತಿಯನ್ನು:**

1. ಮಾನ್ಯ ಆಡಳಿತಗಾರರು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮಹಾನಗರ ಪಾಲಿಕೆಗಳು, ಬೆಂಗಳೂರುರವರ ಅವಗಾಹನೆಗಾಗಿ.
2. ಮಾನ್ಯ ಅಧ್ಯಕ್ಷರು, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತರವರ ಅವಗಾಹನೆಗಾಗಿ.
3. ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು ರವರ ಅವಗಾಹನೆಗಾಗಿ.
4. ವಿಶೇಷ ಆಯುಕ್ತರು(ಹಣಕಾಸು), ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು ರವರ ಅವಗಾಹನೆಗಾಗಿ.
5. ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾ)/ಮುಅ, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತರವರ ಮಾಹಿತಿಗಾಗಿ.
6. ಮುಖ್ಯ ಹಣಕಾಸು ಅಧಿಕಾರಿಗಳು, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತರವರ ಅಗತ್ಯ ಕ್ರಮಕ್ಕಾಗಿ.
7. ಕಛೇರಿ ಪ್ರತಿ.

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ
(ಕರ್ನಾಟಕ ಸರ್ಕಾರ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಜಂಟಿ ಸಂಸ್ಥೆ)
ರಿ.ಸ:30/1, 1ನೇ ಹಾಗೂ 2ನೇ ಮಹಡಿ, ತಿಮ್ಮಯ್ಯ ರಸ್ತೆ,
ಮಿಲ್ಲರ್ ಟ್ಯಾಂಕ್ ಬಂಡ್ ರೋಡ್, ವಸಂತ್ ನಗರ, ಬೆಂಗಳೂರು – 560052.

**ವಿಷಯ:** ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಭೂಭರ್ತಿ ಸ್ಥಳದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನವನ್ನು ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:**
1. ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಶಾಸಕರು, ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರರವರ ಟಿಪ್ಪಣಿ ದಿನಾಂಕ: 17.11.2025.
2. ಮಾನ್ಯ ಉಪಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರರವರ ಟಿಪ್ಪಣಿ ಸಂಖ್ಯೆ: ಉಮು/ವಿಸೌಕ/728/2025-26, ದಿನಾಂಕ: 11.12.2025.

**********************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ನಗರವು ಸುಮಾರು 714 ಚ.ಕಿ.ಮೀ. ವಿಸ್ತೀರ್ಣ ಪ್ರದೇಶದಲ್ಲಿ ವ್ಯಾಪಿಸಿದ್ದು, ಬೆಂಗಳೂರು ನಗರ ಜಿಲ್ಲೆಯಲ್ಲಿ ಉತ್ಪತ್ತಿಯಾಗುವ ಎಲ್ಲಾ ಪ್ರಕಾರದ ಘನತ್ಯಾಜ್ಯದ ಸಂಗ್ರಹಣೆ, ಸಾಗಣೆ ಮತ್ತು ವಿಲೇವಾರಿಯನ್ನು ವೃತ್ತಿಪರವಾಗಿ ನಿರ್ವಹಿಸುವ ಹಿತದೃಷ್ಟಿಯಿಂದ ಘನ ಸರ್ಕಾರವು ಸರ್ಕಾರಿ ಸ್ವಾಮ್ಯದ "ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ" ವನ್ನು ಸ್ಥಾಪಿಸಿರುತ್ತದೆ.

ಪ್ರಸ್ತುತ ಬೆಂಗಳೂರು ನಗರದಲ್ಲಿ ಪ್ರತಿದಿನ ಅಂದಾಜು 6,500 ಮೆ.ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಇದರಲ್ಲಿ ಅಂದಾಜು 3,000 ಮೆ.ಟನ್ ಮಿಶ್ರ ತ್ಯಾಜ್ಯವನ್ನು ಭೂಭರ್ತಿ ಸ್ಥಳಕ್ಕೆ ಸಾಗಿಸಿ ವಿಲೇವಾರಿ ಮಾಡುವುದು ಅನಿವಾರ್ಯವಾಗಿರುತ್ತದೆ. ವಾರ್ಡ್ ಮಟ್ಟದಲ್ಲಿ ಹಲವಾರು ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳ ಮೂಲಕ ಮೂಲದಲ್ಲಿಯೇ ತ್ಯಾಜ್ಯದ ವಿಂಗಡಣೆಗಾಗಿ ಸಾರ್ವಜನಿಕರಿಗೆ ಜಾಗೃತಿಯನ್ನು ಮೂಡಿಸಲಾಗುತ್ತಿದ್ದು, ಸಾರ್ವಜನಿಕರ ಮನಸ್ಥಿತಿ ಬದಲಾವಣೆಗಾಗಿ ಜಾಗೃತಿ ಕಾರ್ಯಕ್ರಮಗಳ ಆಯೋಜನೆಯು ಒಂದು ನಿರಂತರ ಪ್ರಕ್ರಿಯೆಯಾಗಿರುತ್ತದೆ.

ನಗರದಲ್ಲಿ ಯೋಗ್ಯ ಭೂಮಿಯ ಅಲಭ್ಯತೆಯಿಂದಾಗಿ ಸ್ಥಳೀಯ ಸಂಸ್ಥೆಯು ಪ್ರಸ್ತುತ ಮಿಶ್ರ ತ್ಯಾಜ್ಯದ ವಿಲೇವಾರಿಗಾಗಿ ಕೇವಲ ಒಂದೇ ಭೂಭರ್ತಿ ಸ್ಥಳದ ಮೇಲೆ ಅವಲಂಬಿತವಾಗಿರುತ್ತದೆ. ಭೂಭರ್ತಿ ಸ್ಥಳದ ಸುತ್ತಮುತ್ತಲಿನ ಪ್ರದೇಶವು ಜನ ವಸತಿ ಪ್ರದೇಶವಾಗಿದ್ದು, ಮಿಶ್ರ ತ್ಯಾಜ್ಯದ ವಿಲೇವಾರಿಗಾಗಿ ಪದೇ-ಪದೇ ಪ್ರತಿಭಟನೆಯನ್ನು ಎದುರಿಸಬೇಕಾಗಿರುತ್ತದೆ. ಸದರಿ ಸ್ಥಳದಲ್ಲಿ ವಿಲೇವಾರಿಯು ನಿರಂತರವಾಗಿ ಮತ್ತು ಸರಾಗವಾಗಿ ಅನುಷ್ಠಾನಗೊಳ್ಳದಿದ್ದಲ್ಲಿ, ಇಡೀ ನಗರದ ಘನತ್ಯಾಜ್ಯ ನಿರ್ವಹಣಾ ವ್ಯವಸ್ಥೆಯ ಮೇಲೆ ಪರಿಣಾಮ ಬೀರಿ ವ್ಯವಸ್ಥಿತ ಕಾರ್ಯಾಚರಣೆಗೆ ಧಕ್ಕೆಯುಂಟಾಗುತ್ತಿರುತ್ತದೆ. ಘನತ್ಯಾಜ್ಯ ನಿರ್ವಹಣೆಯ ಪೂರ್ಣ ಪ್ರಮಾಣದ ವ್ಯವಸ್ಥಿತ ಕಾರ್ಯಾಚರಣೆಗಾಗಿ ಭೂಭರ್ತಿ ಸ್ಥಳದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂಲಭೂತ

ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮೂಲಕ ಸದರಿ ಪ್ರದೇಶದಲ್ಲಿ ವಾಸಿಸುವ ಜನರ ಜೀವನ ನಿರ್ವಹಣೆಯನ್ನು ಆರೋಗ್ಯಕರವಾಗಿಸಬಹುದಾಗಿರುತ್ತದೆ.

ಸದರಿ ಭೂಭರ್ತಿ ಸ್ಥಳದ ಸರಾಗ ಮತ್ತು ವ್ಯವಸ್ಥಿತ ನಿರ್ವಹಣೆಗಾಗಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಹಿತದೃಷ್ಟಿಯಿಂದ ತುರ್ತಾಗಿ ಅನುದಾನ ಬಿಡುಗಡೆ ಮಾಡುವುದು ಅತ್ಯಾವಶ್ಯಕವಾಗಿರುತ್ತದೆ.

ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಗಿನಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಮು.ಕಾ.ಅ/ಆಶಾ/ಪಿಆರ್/339/2025-26, ದಿನಾಂಕ: 17.02.2026**

ಪ್ರಸಕ್ತ 2025-26ನೇ ಸಾಲಿನಲ್ಲಿ ಬೆಂ.ಘ.ನಿ.ನಿಕ್ಕೆ ಅನುಮೋದನೆ ನೀಡಲಾದ ಕ್ರಿಯಾ ಯೋಜನೆಯ ಮೊತ್ತ ರೂ.1,500 ಕೋಟಿಗಳಲ್ಲಿ ಉಳಿಕೆ ಮೊತ್ತ ಮತ್ತು ಸ್ವಚ್ಛ ಭಾರತ ಅಭಿಯಾನದಡಿ ಕೈಗೊಳ್ಳುವ ಕಾಮಗಾರಿಗಳಿಗೆ ಮೀಸಲಿರಿಸಿದ ಸ್ಥಳೀಯ ಸಂಸ್ಥೆಯ ವಂತಿಕೆ ಮೊತ್ತ ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಪಾವತಿಯಾಗದೇ ಇರುವುದರಿಂದ ಮುಂಬರುವ ಆಯವ್ಯಯ/ಪರಿಷ್ಕೃತ ಆಯವ್ಯಯದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ಮಹಾನಗರ ಪಾಲಿಕೆಗಳು ಅನುದಾನ ಮಂಜೂರು ಮಾಡಬಹುದೆಂಬ ಘಟನೋತ್ತರ ಅನುಮೋದನೆಯ ನಿರೀಕ್ಷಣೆಯ ಮೇರೆಗೆ ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಭೂಭರ್ತಿ ಸ್ಥಳದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.90.00 ಕೋಟಿಗಳ ಅನುದಾನವನ್ನು ಬಿಡುಗಡೆಮಾಡಿ ಆದೇಶಿಸಿದೆ.

(ಮಾನ್ಯ ವ್ಯವಸ್ಥಾಪಕ ನಿರ್ದೇಶಕರುರವರಿಂದ ಅನುಮೋದಿಸಲ್ಪಟ್ಟಿದೆ)

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ

**ಪ್ರತಿಯನ್ನು:**

1. ಮಾನ್ಯ ಆಡಳಿತಗಾರರು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮಹಾನಗರ ಪಾಲಿಕೆಗಳು, ಬೆಂಗಳೂರುರವರ ಅವಗಾಹನೆಗಾಗಿ.
2. ಮಾನ್ಯ ಅಧ್ಯಕ್ಷರು, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತರವರ ಅವಗಾಹನೆಗಾಗಿ.
3. ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು ರವರ ಅವಗಾಹನೆಗಾಗಿ.
4. ವಿಶೇಷ ಆಯುಕ್ತರು(ಹಣಕಾಸು), ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು ರವರ ಅವಗಾಹನೆಗಾಗಿ.
5. ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾ)/ಮುಅ, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತರವರ ಮಾಹಿತಿಗಾಗಿ.
6. ಮುಖ್ಯ ಹಣಕಾಸು ಅಧಿಕಾರಿಗಳು, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತರವರ ಅಗತ್ಯ ಕ್ರಮಕ್ಕಾಗಿ.
7. ಕಛೇರಿ ಪ್ರತಿ.

# ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ

(ಕರ್ನಾಟಕ ಸರ್ಕಾರ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಜಂಟಿ ಸಂಸ್ಥೆ)
ನಂ.30/1, 1ನೇ ಹಾಗೂ 2ನೇ ಮಹಡಿ, ತಿಮ್ಮಯ್ಯ ರಸ್ತೆ,
ಮಿಲ್ಲರ್ ಟ್ಯಾಂಕ್ ಬಂಡ್ ರೋಡ್, ವಸಂತ್ ನಗರ, ಬೆಂಗಳೂರು – 560052.

**ವಿಷಯ:** ಮಹಾದೇವಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಭೂಭರ್ತಿ ಸ್ಥಳದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನವನ್ನು ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:** ಮಾನ್ಯ ಶಾಸಕರು, ಮಹಾದೇವಪುರ ವಿಧಾನ ಸಭಾ ಕ್ಷೇತ್ರರವರ ಟಿಪ್ಪಣಿ.

**********************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ನಗರವು ಸುಮಾರು 714 ಚ.ಕಿ.ಮೀ. ವಿಸ್ತೀರ್ಣ ಪ್ರದೇಶದಲ್ಲಿ ವ್ಯಾಪಿಸಿದ್ದು, ಬೆಂಗಳೂರು ನಗರ ಜಿಲ್ಲೆಯಲ್ಲಿ ಉತ್ಪತ್ತಿಯಾಗುವ ಎಲ್ಲಾ ಪ್ರಕಾರದ ಘನತ್ಯಾಜ್ಯದ ಸಂಗ್ರಹಣೆ, ಸಾಗಣೆ ಮತ್ತು ವಿಲೇವಾರಿಯನ್ನು ವೃತ್ತಿಪರವಾಗಿ ನಿರ್ವಹಿಸುವ ಹಿತದೃಷ್ಟಿಯಿಂದ ಘನ ಸರ್ಕಾರವು ಸರ್ಕಾರಿ ಸ್ವಾಮ್ಯದ "ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ" ವನ್ನು ಸ್ಥಾಪಿಸಿರುತ್ತದೆ.

ಪ್ರಸ್ತುತ ಬೆಂಗಳೂರು ನಗರದಲ್ಲಿ ಪ್ರತಿದಿನ ಅಂದಾಜು 6,500 ಮೆ.ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಇದರಲ್ಲಿ ಅಂದಾಜು 3,000 ಮೆ.ಟನ್ ಮಿಶ್ರ ತ್ಯಾಜ್ಯವನ್ನು ಭೂಭರ್ತಿ ಸ್ಥಳಕ್ಕೆ ಸಾಗಿಸಿ ವಿಲೇವಾರಿ ಮಾಡುವುದು ಅನಿವಾರ್ಯವಾಗಿರುತ್ತದೆ. ವಾರ್ಡ್ ಮಟ್ಟದಲ್ಲಿ ಹಲವಾರು ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳ ಮೂಲಕ ಮೂಲದಲ್ಲಿಯೇ ತ್ಯಾಜ್ಯದ ವಿಂಗಡಣೆಗಾಗಿ ಸಾರ್ವಜನಿಕರಿಗೆ ಜಾಗೃತಿಯನ್ನು ಮೂಡಿಸಲಾಗುತ್ತಿದ್ದು, ಸಾರ್ವಜನಿಕರ ಮನಸ್ಥಿತಿ ಬದಲಾವಣೆಗಾಗಿ ಜಾಗೃತಿ ಕಾರ್ಯಕ್ರಮಗಳ ಆಯೋಜನೆಯು ಒಂದು ನಿರಂತರ ಪ್ರಕ್ರಿಯೆಯಾಗಿರುತ್ತದೆ.

ನಗರದಲ್ಲಿ ಯೋಗ್ಯ ಭೂಮಿಯ ಅಲಭ್ಯತೆಯಿಂದಾಗಿ ಸ್ಥಳೀಯ ಸಂಸ್ಥೆಯು ಪ್ರಸ್ತುತ ಮಿಶ್ರ ತ್ಯಾಜ್ಯದ ವಿಲೇವಾರಿಗಾಗಿ ಕೇವಲ ಒಂದೇ ಭೂಭರ್ತಿ ಸ್ಥಳದ ಮೇಲೆ ಅವಲಂಬಿತವಾಗಿರುತ್ತದೆ. ಭೂಭರ್ತಿ ಸ್ಥಳದ ಸುತ್ತಮುತ್ತಲಿನ ಪ್ರದೇಶವು ಜನ ವಸತಿ ಪ್ರದೇಶವಾಗಿದ್ದು, ಮಿಶ್ರ ತ್ಯಾಜ್ಯದ ವಿಲೇವಾರಿಗಾಗಿ ಪದೇ-ಪದೇ ಪ್ರತಿಭಟನೆಯನ್ನು ಎದುರಿಸಬೇಕಾಗಿರುತ್ತದೆ. ಸದರಿ ಸ್ಥಳದಲ್ಲಿ ವಿಲೇವಾರಿಯು ನಿರಂತರವಾಗಿ ಮತ್ತು ಸರಾಗವಾಗಿ ಅನುಷ್ಠಾನಗೊಳ್ಳದಿದ್ದಲ್ಲಿ, ಇಡೀ ನಗರದ ಘನತ್ಯಾಜ್ಯ ನಿರ್ವಹಣಾ ವ್ಯವಸ್ಥೆಯ ಮೇಲೆ ಪರಿಣಾಮ ಬೀರಿ ವ್ಯವಸ್ಥಿತ ಕಾರ್ಯಾಚರಣೆಗೆ ಧಕ್ಕೆಯುಂಟಾಗುತ್ತಿರುತ್ತದೆ. ಘನತ್ಯಾಜ್ಯ ನಿರ್ವಹಣೆಯ ಪೂರ್ಣ ಪ್ರಮಾಣದ ವ್ಯವಸ್ಥಿತ ಕಾರ್ಯಾಚರಣೆಗಾಗಿ ಭೂಭರ್ತಿ ಸ್ಥಳದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮೂಲಕ ಸದರಿ ಪ್ರದೇಶದಲ್ಲಿ ವಾಸಿಸುವ ಜನರ ಜೀವನ ನಿರ್ವಹಣೆಯನ್ನು ಆರೋಗ್ಯಕರವಾಗಿಸಬಹುದಾಗಿರುತ್ತದೆ.

ಸದರಿ ಭೂಭರ್ತಿ ಸ್ಥಳದ ಸರಾಗ ಮತ್ತು ವ್ಯವಸ್ಥಿತ ನಿರ್ವಹಣೆಗಾಗಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಹಿತದೃಷ್ಟಿಯಿಂದ ತುರ್ತಾಗಿ ಅನುದಾನ ಬಿಡುಗಡೆ ಮಾಡುವುದು ಅತ್ಯಾವಶ್ಯಕವಾಗಿರುತ್ತದೆ.

ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಗಿನಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಮು.ಕಾ.ಅ/ಆಶಾ/ಪಿಆರ್/ 338/2025-26, ದಿನಾಂಕ: 17.02.2026**

ಮಹಾದೇವಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಭೂಭರ್ತಿ ಸ್ಥಳದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸಕ್ತ ಸಾಲಿನ ಕ್ರಿಯಾ ಯೋಜನೆಯಡಿ ಆಂತರಿಕ ಅನುದಾನ ಮರುಹಂಚಿಕೆಗೆ(Internal Re-Appropriation of Funds) ಒಳಪಟ್ಟು ಈ ಕೆಳಕಂಡ ಲೆಕ್ಕ ಶೀರ್ಷಿಕೆಯಡಿ ಅನುದಾನವನ್ನು ಬಿಡುಗಡೆಮಾಡಿ ಆದೇಶಿಸಿದೆ.

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ ಸಂಖ್ಯೆ | ಲೆಕ್ಕ ಶೀರ್ಷಿಕೆ | ಬಿಡುಗಡೆಮಾಡಿದ ಅನುದಾನ ಒಟ್ಟು ರೂ.ಗಳಲ್ಲಿ |
|---|---|---|---|
| 1 | 06-221612-02 | ಸಂಸ್ಕರಣ ಘಟಕಗಳ ಕಾರ್ಯಾಚರಣೆ ಮತ್ತು ನಿರ್ವಹಣೆ | 30,00,00,000/- |
| 2 | | ಭೂಭರ್ತಿ ಸ್ಥಳದ ಕಾರ್ಯಾಚರಣೆ ಮತ್ತು ನಿರ್ವಹಣೆ | 60,00,00,000/- |
| ಒಟ್ಟು | | | 90,00,00,000/- |

(ಮಾನ್ಯ ವ್ಯವಸ್ಥಾಪಕ ನಿರ್ದೇಶಕರುರವರಿಂದ ಅನುಮೋದಿಸಲ್ಪಟ್ಟಿದೆ)

17/2/26

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ

ಪ್ರತಿಯನ್ನು:

1. ಮಾನ್ಯ ಆಡಳಿತಗಾರರು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮಹಾನಗರ ಪಾಲಿಕೆಗಳು, ಬೆಂಗಳೂರುರವರ ಅವಗಾಹನೆಗಾಗಿ.
2. ಮಾನ್ಯ ಅಧ್ಯಕ್ಷರು, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತರವರ ಅವಗಾಹನೆಗಾಗಿ.
3. ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು ರವರ ಅವಗಾಹನೆಗಾಗಿ.
4. ವಿಶೇಷ ಆಯುಕ್ತರು(ಹಣಕಾಸು), ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು ರವರ ಅವಗಾಹನೆಗಾಗಿ.
5. ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾ)/ಮುಅ, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತರವರ ಮಾಹಿತಿಗಾಗಿ.
6. ಮುಖ್ಯ ಹಣಕಾಸು ಅಧಿಕಾರಿಗಳು, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತರವರ ಅಗತ್ಯ ಕ್ರಮಕ್ಕಾಗಿ.
7. ಕಛೇರಿ ಪ್ರತಿ.

# ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ

(ಕರ್ನಾಟಕ ಸರ್ಕಾರ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಜಂಟಿ ಸಂಸ್ಥೆ)
ರಿ.ಕ:30/1, 1ನೇ ಹಾಗೂ 2ನೇ ಮಹಡಿ, ತಿಮ್ಮಯ್ಯ ರಸ್ತೆ,
ಮಿಲ್ಲರ್ ಟ್ಯಾಂಕ್ ಬಂಡ್ ರೋಡ್, ವಸಂತ್ ನಗರ, ಬೆಂಗಳೂರು – 560052.


**ವಿಷಯ:** ಬೆಂಗಳೂರು ದಕ್ಷಿಣ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಸಂಸ್ಕರಣ ಘಟಕದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನವನ್ನು ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:** ಮಾನ್ಯ ಉಪಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರರವರ ಟಿಪ್ಪಣಿ ಸಂಖ್ಯೆ: ಉಮು/ವಿಸೌಕ/728/2025-26, ದಿನಾಂಕ: 11.12.2025.

*********************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ನಗರವು ಸುಮಾರು 714 ಚ.ಕಿ.ಮೀ. ವಿಸ್ತೀರ್ಣ ಪ್ರದೇಶದಲ್ಲಿ ವ್ಯಾಪಿಸಿದ್ದು, ಬೆಂಗಳೂರು ನಗರ ಜಿಲ್ಲೆಯಲ್ಲಿ ಉತ್ಪತ್ತಿಯಾಗುವ ಎಲ್ಲಾ ಪ್ರಕಾರದ ಘನತ್ಯಾಜ್ಯದ ಸಂಗ್ರಹಣೆ, ಸಾಗಣೆ ಮತ್ತು ವಿಲೇವಾರಿಯನ್ನು ವೃತ್ತಿಪರವಾಗಿ ನಿರ್ವಹಿಸುವ ಹಿತದೃಷ್ಟಿಯಿಂದ ಘನ ಸರ್ಕಾರವು ಸರ್ಕಾರಿ ಸ್ವಾಮ್ಯದ "ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ" ವನ್ನು ಸ್ಥಾಪಿಸಿರುತ್ತದೆ.

ಪ್ರಸ್ತುತ ಬೆಂಗಳೂರು ನಗರದಲ್ಲಿ ಪ್ರತಿದಿನ ಅಂದಾಜು 6,500 ಮೆ.ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಇದರಲ್ಲಿ ಅಂದಾಜು 2,020 ಮೆ.ಟನ್ ಹಸಿ ತ್ಯಾಜ್ಯವನ್ನು ಸಂಸ್ಕರಣ ಘಟಕಗಳಿಗೆ ಸಾಗಿಸಿ ಸಂಸ್ಕರಣೆ ಮಾಡಲಾಗುತ್ತಿದ್ದು, ವಾರ್ಡ್ ಮಟ್ಟದಲ್ಲಿ ಹಲವಾರು ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳ ಮೂಲಕ ಮೂಲದಲ್ಲಿಯೇ ತ್ಯಾಜ್ಯದ ವಿಂಗಡಣೆಗಾಗಿ ಸಾರ್ವಜನಿಕರಿಗೆ ಜಾಗೃತಿಯನ್ನು ಮೂಡಿಸಲಾಗುತ್ತಿದೆ. ಸಾರ್ವಜನಿಕರ ಮನಸ್ಥಿತಿ ಬದಲಾವಣೆಗಾಗಿ ಜಾಗೃತಿ ಕಾರ್ಯಕ್ರಮಗಳ ಆಯೋಜನೆಯು ಒಂದು ನಿರಂತರ ಪ್ರಕ್ರಿಯೆಯಾಗಿರುತ್ತದೆ.

ನಗರದಲ್ಲಿನ ಹಸಿ ತ್ಯಾಜ್ಯ ನಿರ್ವಹಣೆಗಾಗಿ ಸ್ಥಳೀಯ ಸಂಸ್ಥೆಯು ಪ್ರಸ್ತುತ ಚಾಲ್ತಿಯಲ್ಲಿರುವ ಸಂಸ್ಕರಣ ಘಟಕಗಳ ಮೇಲೆಯೇ ಅವಲಂಬಿತವಾಗಿದ್ದು, ಸಂಸ್ಕರಣ ಘಟಕದ ಸುತ್ತಮುತ್ತಲಿನ ಪ್ರದೇಶವು ಜನ ವಸತಿ ಪ್ರದೇಶವಾಗಿರುತ್ತದೆ. ತ್ಯಾಜ್ಯದ ಸಂಸ್ಕರಣೆಗಾಗಿ ಪದೇ-ಪದೇ ಪ್ರತಿಭಟನೆಯನ್ನು ಎದುರಿಸಬೇಕಾದಂತಹ ಪರಿಸ್ಥಿತಿ ತಲೆದೋರಿರುತ್ತದೆ. ಸದರಿ ಘಟಕದಲ್ಲಿ ಸಂಸ್ಕರಣೆಯು ನಿರಂತರವಾಗಿ ಮತ್ತು ಸರಾಗವಾಗಿ ಅನುಷ್ಠಾನಗೊಳ್ಳದಿದ್ದಲ್ಲಿ, ಇಡೀ ನಗರದ ಘನತ್ಯಾಜ್ಯ ನಿರ್ವಹಣಾ ವ್ಯವಸ್ಥೆಯ ಮೇಲೆ ಪರಿಣಾಮ ಬೀರಿ ವ್ಯವಸ್ಥಿತ ಕಾರ್ಯಾಚರಣೆಗೆ ಧಕ್ಕೆಯುಂಟಾಗುತ್ತಿರುತ್ತದೆ. ಹಸಿ ತ್ಯಾಜ್ಯ ನಿರ್ವಹಣೆಯ ಪೂರ್ಣ ಪ್ರಮಾಣದ ವ್ಯವಸ್ಥಿತ ಕಾರ್ಯಾಚರಣೆಗಾಗಿ ಸಂಸ್ಕರಣ ಘಟಕದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮೂಲಕ ಸದರಿ ಪ್ರದೇಶದಲ್ಲಿ ವಾಸಿಸುವ ಜನರ ಜೀವನ ನಿರ್ವಹಣೆಯನ್ನು ಆರೋಗ್ಯಕರವಾಗಿಸಬಹುದಾಗಿರುತ್ತದೆ.

ಸದರಿ ಸಂಸ್ಕರಣ ಘಟಕದ ಸರಾಗ ಮತ್ತು ವ್ಯವಸ್ಥಿತ ನಿರ್ವಹಣೆಗಾಗಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಹಿತದೃಷ್ಟಿಯಿಂದ ತುರ್ತಾಗಿ ಅನುದಾನ ಬಿಡುಗಡೆ ಮಾಡುವುದು ಅತ್ಯಾವಶ್ಯಕವಾಗಿರುತ್ತದೆ.

ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಗಿನಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಮು.ಕಾ.ಅ/ಆಶಾ/ಪಿಆರ್/342-A/2025-26, ದಿನಾಂಕ: 17.02.2026**

ಪ್ರಸಕ್ತ 2025-26ನೇ ಸಾಲಿನಲ್ಲಿ ಬೆಂ.ಘ.ನಿ.ನಿಕ್ಕೆ ಅನುಮೋದನೆ ನೀಡಲಾದ ಕ್ರಿಯಾ ಯೋಜನೆಯ ಮೊತ್ತ ರೂ.1,500 ಕೋಟಿಗಳಲ್ಲಿ ಉಳಿಕೆ ಮೊತ್ತ ಮತ್ತು ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ಪರಿಸರ ಪರಿಹಾರದ ನಿಧಿಯಿಂದ ಕೈಗೊಳ್ಳುವ ಕಾಮಗಾರಿಗಳಿಗೆ ಮೀಸಲಿರಿಸಿದ ಮೊತ್ತವು ಪ್ರಸಕ್ತ ಸಾಲಿನಲ್ಲಿ ಪಾವತಿಯಾಗದೇ ಇರುವುದರಿಂದ ಮುಂಬರುವ ಆಯವ್ಯಯ/ಪರಿಷ್ಕೃತ ಆಯವ್ಯಯದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ಮಹಾನಗರ ಪಾಲಿಕೆಗಳು ಅನುದಾನ ಮಂಜೂರು ಮಾಡಬಹುದೆಂಬ ಘಟನೋತ್ತರ ಅನುಮೋದನೆಯ ನಿರೀಕ್ಷಣೆಯ ಮೇರೆಗೆ ಬೆಂಗಳೂರು ದಕ್ಷಿಣ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಸಂಸ್ಕರಣ ಘಟಕದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.20.00 ಕೋಟಿಗಳ ಅನುದಾನವನ್ನು ಬಿಡುಗಡೆಮಾಡಿ ಆದೇಶಿಸಿದೆ.

(ಮಾನ್ಯ ವ್ಯವಸ್ಥಾಪಕ ನಿರ್ದೇಶಕರುರವರಿಂದ ಅನುಮೋದಿಸಲ್ಪಟ್ಟಿದೆ)

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ

**ಪ್ರತಿಯನ್ನು:**

1. ಮಾನ್ಯ ಆಡಳಿತಗಾರರು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮಹಾನಗರ ಪಾಲಿಕೆಗಳು, ಬೆಂಗಳೂರುರವರ ಅವಗಾಹನೆಗಾಗಿ.
2. ಮಾನ್ಯ ಅಧ್ಯಕ್ಷರು, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತರವರ ಅವಗಾಹನೆಗಾಗಿ.
3. ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು ರವರ ಅವಗಾಹನೆಗಾಗಿ.
4. ವಿಶೇಷ ಆಯುಕ್ತರು(ಹಣಕಾಸು), ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು ರವರ ಅವಗಾಹನೆಗಾಗಿ.
5. ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾ)/ಮುಲಿ, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತರವರ ಮಾಹಿತಿಗಾಗಿ.
6. ಮುಖ್ಯ ಹಣಕಾಸು ಅಧಿಕಾರಿಗಳು, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತರವರ ಅಗತ್ಯ ಕ್ರಮಕ್ಕಾಗಿ.
7. ಕಛೇರಿ ಪ್ರತಿ.

# ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ

(ಕರ್ನಾಟಕ ಸರ್ಕಾರ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಜಂಟಿ ಸಂಸ್ಥೆ)
ರಿ.ಸ:30/1, 1ನೇ ಹಾಗೂ 2ನೇ ಮಹಡಿ, ತಿಮ್ಮಯ್ಯ ರಸ್ತೆ,
ಮಿಲ್ಲರ್, ಟ್ಯಾಂಕ್ ಬಂಡ್ ರೋಡ್, ವಸಂತ್ ನಗರ, ಬೆಂಗಳೂರು – 560052.


**ವಿಷಯ:** ದೊಡ್ಡಬಳ್ಳಾಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಸಂಸ್ಕರಣ ಘಟಕದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನವನ್ನು ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:** ಮಾನ್ಯ ಉಪಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರರವರ ಟಿಪ್ಪಣಿ ಸಂಖ್ಯೆ: ಉಮು/ವಿಸೌಕ/728/2025-26, ದಿನಾಂಕ: 11.12.2025.

*********************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ನಗರವು ಸುಮಾರು 714 ಚ.ಕಿ.ಮೀ. ವಿಸ್ತೀರ್ಣ ಪ್ರದೇಶದಲ್ಲಿ ವ್ಯಾಪಿಸಿದ್ದು, ಬೆಂಗಳೂರು ನಗರ ಜಿಲ್ಲೆಯಲ್ಲಿ ಉತ್ಪತ್ತಿಯಾಗುವ ಎಲ್ಲಾ ಪ್ರಕಾರದ ಘನತ್ಯಾಜ್ಯದ ಸಂಗ್ರಹಣೆ, ಸಾಗಣೆ ಮತ್ತು ವಿಲೇವಾರಿಯನ್ನು ವೃತ್ತಿಪರವಾಗಿ ನಿರ್ವಹಿಸುವ ಹಿತದೃಷ್ಟಿಯಿಂದ ಘನ ಸರ್ಕಾರವು ಸರ್ಕಾರಿ ಸ್ವಾಮ್ಯದ "ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ" ವನ್ನು ಸ್ಥಾಪಿಸಿರುತ್ತದೆ.

ಪ್ರಸ್ತುತ ಬೆಂಗಳೂರು ನಗರದಲ್ಲಿ ಪ್ರತಿದಿನ ಅಂದಾಜು 6,500 ಮೆ.ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಇದರಲ್ಲಿ ಅಂದಾಜು 2,020 ಮೆ.ಟನ್ ಹಸಿ ತ್ಯಾಜ್ಯವನ್ನು ಸಂಸ್ಕರಣ ಘಟಕಗಳಿಗೆ ಸಾಗಿಸಿ ಸಂಸ್ಕರಣೆ ಮಾಡಲಾಗುತ್ತಿದ್ದು, ವಾರ್ಡ್ ಮಟ್ಟದಲ್ಲಿ ಹಲವಾರು ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳ ಮೂಲಕ ಮೂಲದಲ್ಲಿಯೇ ತ್ಯಾಜ್ಯದ ವಿಂಗಡಣೆಗಾಗಿ ಸಾರ್ವಜನಿಕರಿಗೆ ಜಾಗೃತಿಯನ್ನು ಮೂಡಿಸಲಾಗುತ್ತಿದೆ. ಸಾರ್ವಜನಿಕರ ಮನಸ್ಥಿತಿ ಬದಲಾವಣೆಗಾಗಿ ಜಾಗೃತಿ ಕಾರ್ಯಕ್ರಮಗಳ ಆಯೋಜನೆಯು ಒಂದು ನಿರಂತರ ಪ್ರಕ್ರಿಯೆಯಾಗಿರುತ್ತದೆ.

ನಗರದಲ್ಲಿನ ಹಸಿ ತ್ಯಾಜ್ಯ ನಿರ್ವಹಣೆಗಾಗಿ ಸ್ಥಳೀಯ ಸಂಸ್ಥೆಯು ಪ್ರಸ್ತುತ ಚಾಲ್ತಿಯಲ್ಲಿರುವ ಸಂಸ್ಕರಣ ಘಟಕಗಳ ಮೇಲೆಯೇ ಅವಲಂಬಿತವಾಗಿದ್ದು, ಸಂಸ್ಕರಣ ಘಟಕದ ಸುತ್ತಮುತ್ತಲಿನ ಪ್ರದೇಶವು ಜನ ವಸತಿ ಪ್ರದೇಶವಾಗಿರುತ್ತದೆ. ತ್ಯಾಜ್ಯದ ಸಂಸ್ಕರಣೆಗಾಗಿ ಪದೇ-ಪದೇ ಪ್ರತಿಭಟನೆಯನ್ನು ಎದುರಿಸಬೇಕಾದಂತಹ ಪರಿಸ್ಥಿತಿ ತಲೆದೋರಿರುತ್ತದೆ. ಸದರಿ ಘಟಕದಲ್ಲಿ ಸಂಸ್ಕರಣೆಯು ನಿರಂತರವಾಗಿ ಮತ್ತು ಸರಾಗವಾಗಿ ಅನುಷ್ಠಾನಗೊಳ್ಳದಿದ್ದಲ್ಲಿ, ಇಡೀ ನಗರದ ಘನತ್ಯಾಜ್ಯ ನಿರ್ವಹಣಾ ವ್ಯವಸ್ಥೆಯ ಮೇಲೆ ಪರಿಣಾಮ ಬೀರಿ ವ್ಯವಸ್ಥಿತ ಕಾರ್ಯಾಚರಣೆಗೆ ಧಕ್ಕೆಯುಂಟಾಗುತ್ತಿರುತ್ತದೆ. ಹಸಿ ತ್ಯಾಜ್ಯ ನಿರ್ವಹಣೆಯ ಪೂರ್ಣ ಪ್ರಮಾಣದ ವ್ಯವಸ್ಥಿತ ಕಾರ್ಯಾಚರಣೆಗಾಗಿ ಸಂಸ್ಕರಣ ಘಟಕದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮೂಲಕ ಸದರಿ ಪ್ರದೇಶದಲ್ಲಿ ವಾಸಿಸುವ ಜನರ ಜೀವನ ನಿರ್ವಹಣೆಯನ್ನು ಆರೋಗ್ಯಕರವಾಗಿಸಬಹುದಾಗಿರುತ್ತದೆ.

ಸದರಿ ಸಂಸ್ಕರಣ ಘಟಕದ ಸರಾಗ ಮತ್ತು ವ್ಯವಸ್ಥಿತ ನಿರ್ವಹಣೆಗಾಗಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಹಿತದೃಷ್ಟಿಯಿಂದ ತುರ್ತಾಗಿ ಅನುದಾನ ಬಿಡುಗಡೆ ಮಾಡುವುದು ಅತ್ಯಾವಶ್ಯಕವಾಗಿರುತ್ತದೆ.

ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಗಿನಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಮು.ಕಾ.ಅ/ಆಶಾ/ಪಿಆರ್/342/2025-26, ದಿನಾಂಕ: 17.02.2026**

ಪ್ರಸಕ್ತ 2025-26ನೇ ಸಾಲಿನಲ್ಲಿ ಬೆಂ.ಘ.ನಿ.ನಿಕ್ಕೆ ಅನುಮೋದನೆ ನೀಡಲಾದ ಕ್ರಿಯಾ ಯೋಜನೆಯ ಮೊತ್ತ ರೂ.1,500 ಕೋಟಿಗಳಲ್ಲಿ ಉಳಿಕೆ ಮೊತ್ತದಿಂದ ಕೈಗೊಳ್ಳುವ ಕಾಮಗಾರಿಗಳಿಗೆ ಮುಂಬರುವ ಆಯವ್ಯಯ/ಪರಿಷ್ಕೃತ ಆಯವ್ಯಯದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ಮಹಾನಗರ ಪಾಲಿಕೆಗಳು ಅನುದಾನ ಮಂಜೂರು ಮಾಡಬಹುದೆಂಬ ಘಟನೋತ್ತರ ಅನುಮೋದನೆಯ ನಿರೀಕ್ಷಣೆಯ ಮೇರೆಗೆ ದೊಡ್ಡಬಳ್ಳಾಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಸಂಸ್ಕರಣ ಘಟಕದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.10.00 ಕೋಟಿಗಳ ಅನುದಾನವನ್ನು ಬಿಡುಗಡೆಮಾಡಿ ಆದೇಶಿಸಿದೆ.

**(ಮಾನ್ಯ ವ್ಯವಸ್ಥಾಪಕ ನಿರ್ದೇಶಕರುರವರಿಂದ ಅನುಮೋದಿಸಲ್ಪಟ್ಟಿದೆ)**

**ಮುಖ್ಯ ಕಾರ್ಯನಿರ್ವಹಣಾಧಿಕಾರಿ**
**ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ**

**ಪ್ರತಿಯನ್ನು:**

1. ಮಾನ್ಯ ಆಡಳಿತಗಾರರು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮಹಾನಗರ ಪಾಲಿಕೆಗಳು, ಬೆಂಗಳೂರುರವರ ಅವಗಾಹನೆಗಾಗಿ.
2. ಮಾನ್ಯ ಅಧ್ಯಕ್ಷರು, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತರವರ ಅವಗಾಹನೆಗಾಗಿ.
3. ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು ರವರ ಅವಗಾಹನೆಗಾಗಿ.
4. ವಿಶೇಷ ಆಯುಕ್ತರು(ಹಣಕಾಸು), ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು ರವರ ಅವಗಾಹನೆಗಾಗಿ.
5. ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾ)/ಮುಅ, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತರವರ ಮಾಹಿತಿಗಾಗಿ.
6. ಮುಖ್ಯ ಹಣಕಾಸು ಅಧಿಕಾರಿಗಳು, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತರವರ ಅಗತ್ಯ ಕ್ರಮಕ್ಕಾಗಿ.
7. ಕಛೇರಿ ಪ್ರತಿ.